ಸಂಕ್ಷಿಪ್ತ ಸುದ್ದಿ

ಗುಂಡು ಹೊಕ್ಕಿದ್ದರೂ ಮಗುವಿಗೆ ಜನ್ಮ

ಶ್ರೀನಗರ: ಕಣಿವೆ ನಾಡು ಜಮ್ಮು-ಕಾಶ್ಮೀರದ ಹೊರವಲಯದ ಸಂಜ್ವಾನ್‌ನಲ್ಲಿರುವ ಸೇನಾ ಸಿಬ್ಬಂದಿ ವಸತಿ ಸಮುಚ್ಚಯದ ಮೇಲೆ ಉಗ್ರರು ದಾಳಿ ನಡೆಸಿದ್ದ ವೇಳೆ ಗುಂಡೇಟು ತಗುಲಿದ ತುಂಬು ಗರ್ಭಿಣಿಯೊಬ್ಬರು ಮಗುವಿಗೆ ಜನ್ಮ ನೀಡಿರುವ ಮಾಹಿತಿ ಸದ್ಯ ಹೊರಬಿದ್ದಿದೆ.

ಶನಿವಾರ ಜೈಶ್ ಎ ಮೊಹಮ್ಮದ್ ಉಗ್ರರು ನಡೆಸಿದ ದಾಳಿಯಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ತುಂಬು ಗರ್ಭಿಣಿ ಹೆಣ್ಣುಮಗುವಿಗೆ ಜನ್ಮ ನೀಡಿದ್ದಾರೆ ಎಂದು ತಿಳಿದುಬಂದಿದೆ. ಮಹಿಳೆಯ ಬೆನ್ನಿನ ಕೆಳಭಾಗಕ್ಕೆ ಗುಂಡು ಹೊಕ್ಕಿದ್ದರೂ ಪವಾಡ ಸದೃಶವಾಗಿ ಪಾರಾಗಿದ್ದು, 35 ವಾರಗಳ ತುಂಬು ಗರ್ಭಿಣಿಯನ್ನು ಏರ್ ಲಿಫ್ಟ್ ಮೂಲಕ ತುರ್ತಾಗಿ ಆಸ್ಪತ್ರೆಗೆ ರವಾನೆ ಮಾಡಲಾಗಿತ್ತು

ನಿಮ್ಮ ಎಲ್ಲ ಕನಸುಗಳನ್ನು ನಾವು ನನಸು ಮಾಡುತ್ತೇವೆ



ಅಬುದಾಬಿಯಲ್ಲಿ ಭಾರತೀಯ ಸ ಅಬುದಾಬಿ: ನೀವು ಭಾರತದ ಪ್ರತಿ ಭಾಗವನ್ನು ಪ್ರತಿನಿಧಿಸುತ್ತಿದ್ದೀರಿ, ಭಾರತ ಎಷ್ಟು ವೇಗವಾಗಿ ಬೆಳವಣಿಗೆ ಹೊಂದುತ್ತಿದೆ ಎಂಬುದು ನಿಮಗೆ ಗೊತ್ತಿದೆ ಎಂದು ಅಬುದಾಬಿಯ ಲ್ಲಿಂದು ಪ್ರಧಾನಿ ನರೇಂದ್ರ ಮೋದಿ ಭಾರತೀಯ ಸಮುದಾಯ ವನ್ನುದ್ದೇಶಿಸಿ ಹೇಳಿದರು. ಪ್ರಧಾನಿಯಾದ ನಂತರ ಎರಡನೇ ಬಾರಿಗೆ ಯುನೈಟೆಡ ಅರಬ ಎಮಿರೇಟ್ಸ ಗೆ ನಿನ್ನೆ ತೆರಳಿದ ಪ್ರಧಾನಿ ಮೋದಿ ಇಂದು ಅಬುದಾಬಿಯಲ್ಲಿ ಮೊದಲ ಹಿಂದೂ ದೇವಾಲಯಕ್ಕೆ ಶಂಕುಸ್ಥಾಪನೆ ನೆರವೇರಿಸಿದರು. ನಂತರ ಭಾರತೀಯ ಸಮುದಾಯವನ್ನುದ್ದೇಶಿಸಿ ಮಾತನಾಡಿ, ಭಾರತ ಇಂದು ನಿರಾಶಾವಾದದ ಹಂತವನ್ನು ದಾಟಿ ಹೋಗಿದೆ. ಇದು ಸಾಧ್ಯವೇ ಎಂಬ ಮನಸ್ಥಿತಿಯಿಂದ ಇಂದು ಭಾರತೀಯರು ಹೊರಬಂದು ಮೋದಿಯವರೇ ಯಾವಾಗ ಇದು ಆಗುತ್ತದೆ ಎಂದು ಕೇಳುವ ಸ್ಥಿತಿಗೆ ಬಂದಿದ್ದಾರೆ. ಇದು ಆಗುವುದಿದ್ದರೆ ಈಗಲೇ ಆಗುತ್ತದೆ ಎಂಬ ಹೊಸ ನಂಬಿಕೆ ಜನರಲ್ಲಿ ಮೂಡಿದೆ ಎಂದು ಹೇಳಿದರು.

ರಾಹುಲ್ ವಾಗ್ದಾಳಿ

ಕುಷ್ಟಗಿ, ಫೆ.11-ರಾಜ್ಯದಲ್ಲಿ ಆಡಳಿತ ನಡೆಸಿದ ಬಿಜೆಪಿಯ ಬ್ರಹ್ಮಾಂಡ ಭ್ರಷ್ಟಾಚಾರ ವಿಶ್ವದಾಖಲೆ ಬರೆದಿದೆ. ಭ್ರಷ್ಟಾಚಾರದಿಂದ ಮುಖ್ಯಮಂತ್ರಿ ಸೇರಿದಂತೆ 11 ಜನ ಜೈಲಿಗೆ ಹೋಗಿದ್ದು, ಎಂಟು ಸಚಿವರು ರಾಜೀನಾಮೆ ನೀಡಿದ್ದರು ಎಂದು ಎಐಸಿಸಿ ಅಧ್ಯಕ್ಷ ರಾಹುಲ ಗಾಂಧಿ ಬಿಜೆಪಿ ವಿರುದ್ಧ ಹರಿಹಾಯ್ದರು. ಜನಾಶೀರ್ವಾದ ಯಾತ್ರೆಯ ಎರಡನೇ ದಿನವಾದ ಇಂದು ಕುಷ್ಟಗಿಯಲ್ಲಿ ಆಯೋ ಜಿಸಿದ್ದ ಸಾರ್ವಜನಿಕ ಸಭೆಯಲ್ಲಿ ಮಾತನಾ ಡಿದ ಅವರು, ರಾಜ್ಯದಲ್ಲಿ 2008ರಿಂದ 13ರವರೆಗೆ ಆಡಳಿತ ನಡೆಸಿದ ಬಿಜೆಪಿ ಭ್ರಷ್ಟಾಚಾರದಲ್ಲಿ ಗಿನ್ನಿಸ ದಾಖಲೆ ಮಾಡಿದೆ. ಇದರಿಂದ ಆ ಸರ್ಕಾರವನ್ನು ಜನ ತಿರಸ್ಕರಿಸಿದ್ದರು. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ ಸರ್ಕಾರ ನುಡಿದಂತೆ ನಡೆದಿದೆ. ಭ್ರಷ್ಟಮುಕ್ತ ಆಡಳಿತ ನೀಡಿದೆ ಎಂದು ಹೇಳಿದರು.

ಹಳೆ ನೋಟ್‌ಗಳ ಪರಿಶೀಲನೆ!



ಮುಂಬೈ: 1000-500 ಮುಖಬೆಲೆಯ ನೋಟು ಬ್ಯಾನ್ ಆಗಿ ಬರೋಬ್ಬರಿ ಒಂದೂವರೆ ವರ್ಷ ನಂತರವೂ ಭಾರತೀಯ ರಿಸರ್ವ ಬ್ಯಾಂಕ್ ಇನ್ನೂ ಹಳೆಯ ನೋಟು ಗಳ ಪರಿಶೀಲನೆಯಲ್ಲಿ ತೊಡಗಿದೆ ಎಂದು ತಿಳಿದು ಬಂದಿದೆ. 500, 1000 ನೋಟುಗಳ ಪಕ್ಕಾ ಲೆಕ್ಕ ಹಾಗೂ ಅಸಲಿ ನೋಟು ಹೌದಾ ಅಥವಾ ಇಲ್ಲವಾ ಎಂಬುದನ್ನು ಪರಿಶೀ ಲಿಸುತ್ತಿದ್ದೇವೆ ಎಂದು ಆರ್‌ಬಿಐ ತಿಳಿಸಿದೆ. ಕೆಲವು ನಿರ್ದಿಷ್ಟ ಬ್ಯಾಂಕ್‌ಗಳಲ್ಲಿ ಠೇವಣಿಯಾಗಿರುವ ನೋಟುಗಳು, ಭಾರಿ ಠೇವಣಿಗಳಾಗಿರುವುದು ಹಾಗೂ ಅನುಮಾನಾಸ್ಪದವಾಗಿ ಠೇವಣಿಯಾಗಿರುವುದರ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಸ್ಪಷ್ಟಪಡಿಸಿದೆ. ಜೂನ್ 30, 2017ರ ವೇಳೆಗೆ 15.28 ಲಕ್ಷ ಕೋಟಿ ರೂಪಾಯಿಗಳು ಆರ್‌ಬಿಐಗೆ ಬಂದಿವೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಮಾಧ್ಯಮಗಳು ಸಂಸ್ಕೃತಿಯ ರಾಯಭಾರಿಗಳು

ಹಾಸನ: ಸ್ಮಾರಕಗಳು ಒಂದು ದೇಶದ ಸಂಸ್ಕೃತಿಯ ಮಾರ್ಗಸೂಚಿಯಾಗಿದ್ದರೆ ಮಾಧ್ಯಮಗಳು ಸಂಸ್ಕೃತಿ ರಕ್ಷಣೆಯ ರಾಯಭಾರಿಗಳು ಎಂದು ಪ್ರೊ.ಎಂ.ಡಿ.ಇರ್ಷಾದ್ ಅಭಿಪ್ರಾಯಪಟ್ಟರು.

ನಗರದ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜಿನ(ಸ್ವಾಯತ್ತ) ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರು ಶನಿವಾರ ಶ್ರವಣಬೆಳಗೊಳಕ್ಕೆ ಭೇಟಿ ನೀಡಿ ಅಲ್ಲಿಯ ಚಂದ್ರಗಿರಿ ಬೆಟ್ಟದಲ್ಲಿರುವ ಶಾಸನ ಬಸದಿಯಲ್ಲಿ ಆಯೋಜಿಸಿದ್ದ ಸಾರಕಗಳ ಸಂರಕ್ಷಣೆಯಲ್ಲಿ ಪತ್ರಿಕೋದ್ಯಮದ ಪಾತ್ರ ವಿಷಯ ಕುರಿತು ನಡೆದ ವಿಶೇಷ ವಿಚಾರ ಸಂಕಿರಣ ಕಾರ್ಯಕ್ರಮವನ್ನುದ್ದೇಶಿಸಿ ಸಂಪನ್ಮೂಲವ್ಯಕ್ತಿಯಾಗಿ ಅವರು ಮಾತನಾಡಿದರು.

ತ್ಯಾಗದ ಸಂಕೇತವಾದ ಭಗವಾನ್ ಬಾಹುಬಲಿ ಮೂರ್ತಿಯ 88ನೇ ಮಹಾಮಸ್ತಕಾಭಿಷೇಕದ ಅಂಗವಾಗಿ ಭಾರತ ಮತ್ತು ಹೊರ ರಾಷ್ಟ್ರಗಳಿಂದಲೂ ಲಕ್ಷಾಂತರ ಭಕ್ತರು ಜೈನಕಾಶಿ ಶ್ರವಣ ಬೆಳಗೊಳಕ್ಕೆ ಆಗಮಿಸುತ್ತಿದ್ದಾರೆ. ಇಲ್ಲಿ ಸಹಸ್ರಾರು ಸಂಖ್ಯೆಯ ಜನಸ್ತೋಮ ಸೇರಲು ಕಾರಣ ಜೈನ ಧರ್ಮದ ಪರಂಪರೆ. ಸಾವಿನಲ್ಲೂ ಸಂಭ್ರಮವನ್ನು ಕಾಣುವ ಜೈನ ಆಧ್ಯಾತ್ಮಿಕ ಪರಂಪರೆ, ಸಂಪ್ರದಾಯ, ಆಚಾರ-ವಿಚಾರ, ಜೈನ ಬಾಹುಬಲಿ ಮೂರ್ತಿಯ ಬಗ್ಗೆ ಜನಮನಕ್ಕೆ ಸುದ್ದಿಯನ್ನು ಮುಟ್ಟಿಸುವುದರ ಮೂಲಕ ಜನರದಲ್ಲಿ ಈ ಕ್ಷೇತ್ರದ ಮಹಿಮೆಯನ್ನು ನೂರಾರು ದಿನಪತ್ರಿಕೆಗಳು, ವಾರಪತ್ರಿಕೆಗಳು ಕಾರ್ಯನಿರ್ವಹಿಸುತ್ತಿದ್ದು, ಸಂದೇಶ ವಾಹಕರಾಗಿ ಈ ಕ್ಷೇತ್ರದ ಸುದ್ದಿಯ ರಾಯಭಾರಿಗಳಾಗಿದ್ದು, ಪತ್ರಿಕೆಗಳು ಕೇವಲ ಟೀಕಿಸುವುದಕ್ಕೆ ಮಾತ್ರವೇ ಸೀಮಿತವಾಗಿರದೆ ಈ ನಾಡಿನ ಸಂಸ್ಕೃತಿಯ ಕೈಗನ್ನಡಿಯಾಗಿ ಕಾರ್ಯನಿರ್ವಹಿಸುತ್ತಿರುವುದು ಶ್ಲಾಘನೀಯ ಎಂದರು.

ಒಂದು ದೇಶದ ಸರ್ವತೋಮುಖವಾದ ಅಭಿವೃದ್ಧಿ ಎಷ್ಟರಮಟ್ಟಿಗೆ ಎಂಬುದನ್ನು ಅರಿಯಬೇಕಾದರೆ ಅರಿವಿನ ಪತ್ರಿಕೆಗಳೆಷ್ಟು ಎಂದು ಅರಿತರೆ ಸಾಕು. ಈ ದೃಷ್ಟಿಯಿಂದ ಪತ್ರಿಕೆಗಳು ಜನ ಜೀವನದ ಕೈಗನ್ನಡಿ ಎಂದು ಕರೆಯಬಹುದು. ಮಾಧ್ಯಮ ಸಂಸ್ಕೃತಿಯ ಪೋಷಕಾಂಶವಾಗಿ ಕಾರ್ಯನಿರ್ವಹಿಸುತ್ತಾ ಬಂದಿದೆ. ನಮ ಪ್ರಾಚೀನ ಗ್ರಂಥಗಳು ಪರಂಪರೆ ಇತಿಹಾಸವನ್ನು ರೂಪಿಸುವಲ್ಲಿ ಕ್ರಿ.ಶ.1837ರ ಕಾಲದಲ್ಲಿ ಜೇಮ್ಸ್ ಪ್ರಿನ್ಸೆಸ್ ದಿ ಏಷ್ಯಾಟಿಕ್ ಸೊಸೈಟಿ ಎಂಬ ಪತ್ರಿಕೆಯಲ್ಲಿ ಲೇಖನ ಪ್ರಕಟಿಸಿ ನೂರಾರು ಇತಿಹಾಸಕಾರರಿಗೆ ಸಂಶೋಧಕರಿಗೆ ಜನಸಾಮಾನ್ಯರಿಗೆ ಐತಿಹಾಸಿಕ ಸಾರಕಗಳ ಸಂರಕ್ಷಣೆಯ ಕರೆನೀಡಿದೆ. ಬ್ರಾಹಿಲಿ ಪಿಯಲ್ಲಿದ್ದ ಅಶೋಕನ ಶಾಸಗಳನ್ನು ಪತ್ರಿಕೆಯಲ್ಲಿ ಪ್ರಕಟಿಸುವುದರ ಮೂಲಕ ಅಶೋಕನಂದ ರಾಜನ ರಾಜತ್ವದ ಕಲ್ಪನೆಯನ್ನು ಜನ ಸಾಮಾನ್ಯರಿಗೆ ಪರಿಚಯಿಸುವ ಕಾರ್ಯಕೈಗೊಂಡ ಕೇಂದ್ರ ಪುರತತ್ವ ಇಲಾಖೆಯ ನಿರ್ದೇಶಕನಾಗಿದ್ದ ಸರ್‌ಜಾನ್ ಮಾರ್ಷಲ್ ಸಿಂಧೂ ನಾಗರಿಕತೆ ಯನ್ನು ಆಧರಿಸಿ ಪತ್ರಿಕೆಗಳಲ್ಲಿ ಬರೆದ ಲೇಖನಗಳು ಭಾರತದ ಇತಿಹಾಸದ ಮೈಲಿಗಲ್ಲುಗಳಾಗಿ ಪರಿವರ್ತಿಸುವಲ್ಲಿ ಮಹತ್ವದ ಕಾರ್ಯವನ್ನು ಕೈಗೊಂಡಿತು ಎಂದು ತಿಳಿಸಿದರು. 1840ರಲ್ಲಿ ವೆಸ್ಲಿಯನ್ ಕ್ರೈಸ್ತ ಮಿಷನರಿಯ ತನ್ನ ತತ್ವಗಳನ್ನು ಪ್ರಚಾರ ಪಡಿಸಲು ಬೆಂಗಳೂರಿನಲ್ಲಿ ಕನ್ನಡ ಪತ್ರಿಕೆಗಳನ್ನು ಮುದ್ರಿಸಲು ಪ್ರಾರಂಭಿಸಿತು. 1852ರಲ್ಲಿ ರೋಮನ್ ಕ್ಯಾಥೋಲಿಕ್ ಮಿಷನರಿಗಳು ಮುದ್ರಣಗಳನ್ನು ಪ್ರಾರಂಭಿಸಿದವು. ಮೈಸೂರಿನಲ್ಲಿ ಪ್ರಾರಂಭವಾದ ಪ್ರಪ್ರಥಮ ಪತ್ರಿಕೆಗಳೆಂದರೆ ಎಂದರೆ ಮೈಸೂರು ವೃತ್ತಾಂತ ಹಾಗೂ ಭೋಧಿನಿ ಈ ಕನ್ನಡ ವಾರಪತ್ರಿಕೆ 1859 ರಿಂದ 1898ರ ಅವಧಿಯಲ್ಲಿ ಚಾಲ್ತಿಯಲ್ಲಿದ್ದವು.

ನಿರಾಶ್ರಿತರಿಗೆ ಹಕ್ಕು ಪತ್ರ ವಿತರಣೆ

ಅರಸೀಕೆರೆ: ತಮ್ಮ ಕ್ಷೇತ್ರದಲ್ಲಿ ಪ್ರತಿಯೊಬ್ಬರೂ ತಮ್ಮ ಸ್ವಂತ ಸೂರಿನಲ್ಲಿ ವಾಸಿಸುವಂತೆ ಶ್ರಮವಹಿಸಿದ್ದು ಆ ನಿಟ್ಟಿನಲ್ಲಿ ತಮ್ಮ ಅವಧಿಯಲ್ಲಿ ವಸತಿ ಯೋಜನೆಯಲ್ಲಿ ಸಾವಿರಾರು ನಿವೇಶನಗಳನ್ನು ತಂದು ಬಡವರಿಗೆ ನೀಡುವ ಮೂಲಕ ಉತ್ತಮ ಕಾರ್ಯ ಮಾಡಿರುವುದಾಗಿ ಶಾಸಕ ಕೆ.ಎಂ.ಶಿವಲಿಂಗೇಗೌಡ ಹೇಳಿದರು.

ನಗರದ ಸರಸ್ವತಿ ಪುರಂ ಕೊಳಗೇರಿ ಪ್ರದೇಶ, ಇಂದಿರಾ ನಗರ ಸೇರಿದಂತೆ ಹಲವು ವಾರ್ಡ್‌ಗಳಲ್ಲಿ ನಿರಾಶ್ರಿತರಿಗೆ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಹಕ್ಕು ಪತ್ರ ವಿತರಣೆ ಸಂದರ್ಭದಲ್ಲಿ ಮಾತನಾಡಿದ ಶಾಸಕರು, ಸಾರ್ವಜನಿಕರ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ಕುಡಿಯುವ ನೀರು ಸೇರಿದಂತೆ ಉತ್ತಮ ರಸ್ತೆಗಳನ್ನು ಕ್ಷೇತ್ರದಾದ್ಯಂತ ಅಭಿವೃದ್ಧಿಪಡಿಸಿದ್ದೇನೆ ಆದರೇ ಪ್ರತಿ ಬಡವರಿಗೆ ಸ್ವಂತ ಸೂರನ್ನು ನೀಡುವ ನಿಟ್ಟಿನಲ್ಲಿ ಪ್ರತಿ ಅವಧಿಯಲ್ಲೂ ಸಾಧ್ಯವಾದಷ್ಟು ವಸತಿಗಳನ್ನು ತಂದು ಗುಡಿಸಲು ಮುಕ್ತ ಕ್ಷೇತ್ರವನ್ನಾಗಿಸಲು ಶ್ರಮಿಸಿದ್ದು ಆ ನಿಟ್ಟಿನಲ್ಲಿ ಕೊಳಗೇರಿ ಪ್ರದೇಶಗಳಲ್ಲಿ ವಾಸಿಸುವ ನಿವಾಸಿಗಳಿಗೆ ಹಕ್ಕು ಪತ್ರಗಳನ್ನು ವಿತರಿಸುತ್ತಿರುವುದು ಸಂತಸ ತಂದಿದೆ ಎಂದರು.

ಮನೆ ಕಟ್ಟಲು ಸಹಾಯ ಹಣ: ಹಕ್ಕು ಪತ್ರ ನೀಡುವುದಲ್ಲದೇ ಪ್ರತಿ ಮನೆ ನಿರ್ಮಾಣಕ್ಕೆ 4 ಲಕ್ಷದ 60 ಸಾವಿರ ರೂಗಳನ್ನು ನೀಡಲಾಗುವುದು ಅದನ್ನು ಬಳಸಿಕೊಂಡು ಸುಂದರ ಮನೆ ನಿರ್ಮಾಣ ಮಾಡಿಕೊಳ್ಳುವಂತೆ ಹೇಳಿದರು.

ಬಡವರ ಕೆಲಸ ಮಾಡೋಣ: ಪ್ರತಿಯೊಬ್ಬ ರಾಜಕಾರಣಿಯು ಬಡವರ ಪರವಾದ ಕೆಲಸಗಳನ್ನು ಮಾಡಿದಾಗ ದೊರೆಯುವ ಸಂತಸ ಯಾವುದೇ ಸಂಪತ್ತು ದೊರಕಿದರೂ ಸಿಗುವುದಿಲ್ಲ, ಹಲವಾರು ವರ್ಷಗಳಿಂದ ಕೊಳಗೇರಿ ಪ್ರದೇಶಗಳ ನಿವಾಸಿಗಳಿಗೆ ಹಕ್ಕು ಪತ್ರ ನೀಡುವ ನಿಟ್ಟಿನಲ್ಲಿ ಹೋರಾಟವನ್ನು ನಡೆಸುತ್ತಿದ್ದೆವು ಆದರೇ ಇಂದು ಮಾಡುತ್ತಿರುವ ಕೆಲಸ ಎಲ್ಲದಕ್ಕಿಂತಲೂ ಮೇಲು ಎಂದು ಹೇಳಿದರು.

ನಗರಸಭೆ ಅಧ್ಯಕ್ಷ ಸಮೀವುಲ್ಲಾ ಮಾತನಾಡಿ, ಕೊಳಗೇರಿ ನಿವಾಸಿಗಳಿಗೆ ಹಲವು ಸೌಲಭ್ಯಗಳನ್ನು ಈಗಾಗಲೇ ನಗರಸಭೆ ವತಿಯಿಂದ ಒದಗಿಸುತ್ತಿದ್ದರೂ ಬಡವರಿಗೆ ಶಾಸಕರು ಹಕ್ಕು ಪತ್ರವನ್ನು ನೀಡಬೇಕೆಂದು ಹಲವು ಬಾರಿ ಸರ್ಕಾರದ ಗಮನಕ್ಕೆ ತಂದು ಇಂದು ಎಲ್ಲರಿಗೂ ಒಳಿತನ್ನು ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ನಗರವಾಸಿಗಳಿಗೆ ನಿವೇಶನಗಳನ್ನು ಹಂಚಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ನಗರಸಭೆ ಉಪಾಧ್ಯಕ್ಷ ಪಾರ್ಥಸಾರಥಿ, ಸದಸ್ಯ ಬಿ.ಎನ್. ವಿದ್ಯಾಧರ್, ಪಂಚಾಕ್ಷರಿ ಇದ್ದರು.

ದಲಿತ ಸಂಘಟನೆಗಳ ಒಗ್ಗಟಿನ ಮಂತ್ರ

ಸಕಲೇಶಪುರ: ಮೀಸಲಾತಿ ಕ್ಷೇತ್ರ ವನ್ನು ದುರ್ಬಳಕೆಮಾಡಿಕೊಳ್ಳುತ್ತಿವುವರ ವಿರುದ್ಧ ದಲಿತರ ರಾಜಕೀಯ ನೈಜ್ಯ ಶಕ್ತಿಯ ಪ್ರದರ್ಶನವಾಗಬೇಕು ಹಾಗೂ ಈ ಕ್ಷೇತ್ರದ ಸ್ವಾಭಿಮಾನಕ್ಕಾಗಿ ಮುಂದಿನ ಚುನಾವಣೆಯಲ್ಲಿ ಎಲ್ಲಾ ವರ್ಗದ ಮತದಾರರು ನಾವು ಮಾರಟಕ್ಕಿಲ್ಲ ಎಂಬುದನ್ನು ಪ್ರದರ್ಶಿಸಬೇಕು ಎಂದು ಕದಸಂಸ ರಾಜ್ಯ ಸಂಘಟನಾ ಸಂಚಾಲಕ ನಾಗರಾಜು ಹೆತ್ತೂರು ಹೇಳಿದರು.

ಪಟ್ಟಣದ ನಂಜಮ್ಮ ಮಹಿಳಾ ಸಮಾಜದಲ್ಲಿ ಭಾನುವಾರ ನಡೆದ ದಲಿತರ ಸ್ವಾಭಿಮಾನಿ ಚಿಂತನೆ ಸಭೆಯಲ್ಲಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮೀಸಲಾತಿ ಕ್ಷೇತ್ರ ಜಾಕ್‌ಪಾಟ್, ಹೆಂಡ, ಹಣ , ಸೀರೆ, ಪಂಚೆ ರಾಜಕಾರಣಕ್ಕೆ, ಹಣಕೊಟ್ಟು ಜನರನ್ನು ಕೊಂಡು ಕೊಳ್ಳುವ ಕೆಟ್ಟಸ್ಥಿತಿಗೆ ಕ್ಷೇತ್ರವನ್ನು ತಂದೊಡ್ಡುತ್ತಿರುವ ಪಕ್ಷಗಳಿಗೆ ದಲಿತರು ಅವರ ವಿರುದ್ಧ ಮತ ಚಲಾಯಿಸುವ ಮೂಲಕ ಉತ್ತರವಾಗಬೇಕು ಎಂದು ಹೇಳಿದರು.

ಈ ಕ್ಷೇತ್ರವನ್ನು ದಲಿತರಿಂದ ಕೈತಪ್ಪಿ ಹೊಗುವ ಅಪಾಯ ಮೆಲ್ನೋಟಕ್ಕೆ ಕಂಡು ಬರುತ್ತಿದೆ ಇದರ ಪರಿಣಾಮ ಇಲ್ಲಿಯ ಮೇಲ್ವರ್ಗದ ಮೇಲು ಬೀಳಲಿದೆ ಈ ಜಾಕ್ ಪಾಟ್ ತಂಡ ಮೀಸಲಾತಿಯ ನಂತರದ ಸಾಮಾನ್ಯ ಕ್ಷೇತ್ರಕ್ಕೂ ಲಗ್ಗೆ ಇಡುತ್ತದೆ ಈ ಮಣ್ಣಿನಲ್ಲಿ ಹುಟ್ಟಿ ಬೆಳೆದ ಎಲ್ಲರೂ ಅಧಿಕಾರವಲ್ಲದೆ ಮಣ್ಣು ತಿನ್ನಬೇಕಾಗುತ್ತದೆ ಎಂದರು.

ಈ ನಿಟ್ಟಿನಲ್ಲಿ ಮುಂಬರುವ ದಿನಗಳಲ್ಲಿ ಕ್ಷೇತ್ರದ ದಲಿತರು ಸೇರಿದಂತೆ ಮತದಾರರು ಒಗ್ಗೂಡಿ ಸ್ವಾಭಿಮಾನಿ ಸಮಾವೇಶವನ್ನು ಹಮಿಕೊಳ್ಳಲಾಗುವುದು ಎಂದರು. ದಲಿತ ಮುಖಂಡ ಬೈಕೆರೆ ದೇವರಾಜು ಮಾತನಾಡಿ, ಮೀಸಲು ಕ್ಷೇತ್ರದಲ್ಲಿ ದಲಿತರು ಮತ್ತು ಅಲ್ಪಾಸಂಖ್ಯಾತರು ಭಯದಿಂದ ಬದುಕುವ ಸ್ಥಿತಿ ನಿರ್ಮಾಣವಾಗುತ್ತಿರುವುದು ಆತಂಕಕಾರಿ ವಿಚಾರವಾಗಿದ್ದು, ಕೋಮು ವಾದಿ ಶಕ್ತಿಗಳು ಕ್ಷೇತ್ರದಲ್ಲಿ ಬೇರೂರದಂತೆ ತಡೆಯುವ ನಿಟ್ಟಿನಲ್ಲಿ ದಲಿತ ಮತ್ತು ಮುಸ್ಲಿಂರ ಐಕ್ಯತೆಯಾಗದೆ. ಇದಕ್ಕಾಗಿ ದಲಿತರ ಸಂಘಟಿತರಾಗಿ ಹೋರಾಡಬೇಕಿದೆ ಎಂದರು.

ದಲಿತ ಮುಖಂಡ ಕಾಡಪ್ಪ ಮಾತನಾಡಿ, ಎಲ್ಲಾ ಪಕ್ಷದವರು ದಲಿತರನ್ನು ರಾಜಕೀಯವಾಗಿ ಕಡೆಗಣಿಸುತ್ತಿದ್ದು ಟಿಕೆಟ್ ನೀಡುವಲ್ಲಿ ವಂಚಿಸುವ ಮೂಲಕ ಮೀಸಲಾತಿ ಕ್ಷೇತ್ರವನ್ನು ದಿವಾಳಿ ಮಾಡಲು ಮುಂದಾಗಿದ್ದಾರೆ. ದಲಿತರು ಎಚ್ಚೆತ್ತುಕೊಂಡು ಕ್ಷೇತ್ರದ ಸ್ವಾಭಿಮಾನಕ್ಕೆ ದಕ್ಕೆಯಾಗದಂತೆ ಸ್ಥಳೀಯ ಸೂಕ್ತ ಅಭ್ಯರ್ಥಿಯನ್ನು ಆಯ್ಕೆ ಮಾಡುವಲ್ಲಿ ದಲಿತರು ಜಾಗೃತರಾಗಬೇಕು ಎಂದರು.

ದಲಿತ ಮುಖಂಡ ಯಸಳೂರು ಮಂಜು ಮಾತನಾಡಿ, ರಾಜ್ಯದಲ್ಲೇ ದೊಡ್ಡ ಮೀಸಲು ಕ್ಷೇತ್ರವಾಗಿರುವ ಆಲೂರು-ಸಕಲೇಶಪುರದಲ್ಲಿ ಸುಮಾರು 80 ಸಾವಿರ ದಲಿತರ ಮತಗಳಿವೆ.ಆದರೆ ಬಲಗೈ ದಲಿತರ ಮತಗಳೇ ಹೆಚ್ಚಿರುವ ಈ ಕ್ಷೇತ್ರದಲ್ಲಿ ಮೀಸಲು ಕ್ಷೇತ್ರವಾಗಿ 10 ವರ್ಷ ಕಳೆದರೂ ಒಬ್ಬ ಸ್ಥಳೀಯ ಬಲಗೈಲ ಅಭ್ಯರ್ಥಿಯನ್ನು ಆಯ್ಕೆ ಮಾಡಲು ದಲಿತರು ವಿಫಲವಾಗಿರುವುದು ದುರಂತವಾಗಿದ್ದು, ಮುಂದಿನ ಚುನಾವಣೆಯಲ್ಲಿ ಕ್ಷೇತ್ರದಿಂದ ಬಲಗೈ ಅಭ್ಯರ್ಥಿಯನ್ನು ಬೆಂಬಲಿಸುವ ಮೂಲಕ ಶಾಸಕರಾಗಿ ಆಯ್ಕೆಯಾಗಲು ದಲಿತರು ಚಿಂತಿಸಿ ಮತಚಲಾಯಿಸಬೇಕಿದೆ ಎಂದರು.

ಸಭಾನಿರ್ಣಾಯ: ಬಿಜೆಪಿ ಮೀಸಲು ಕ್ಷೇತ್ರದಿಂದ ಹೊರಗಿನಿಂದ ಬಂದ ವ್ಯಕ್ತಿಯೊಬ್ಬರನ್ನು ತನ್ನ ಅಧಿಕೃತ ಅಭ್ಯರ್ಥಿ ಎಂದು ಘೋಷಣೆ ಮಾಡುವ ಮೂಲಕ ಕ್ಷೇತ್ರದ ಬಹುಸಂಖ್ಯಾತ ಬಲಗೈ ಸಮುದಾಯಕ್ಕೆ ಹಾಗೂ ಸ್ಥಳೀಯರಿಗೆ ದ್ರೋಹ ಬಗೆದಿದ್ದು, ಪಕ್ಷದ ವಿರುದ್ಧ ಹೋರಾಟ ನಡೆಸಿ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಲು ವಿವಿಧ ದಲಿತ ಮುಖಂಡರು ತೀರ್ಮಾನ ಕೈಗೊಂಡರು. ಸಭೆಯಲ್ಲಿ ಜೈಭೀಮ್ ಮಂಜು, ಮಾಸವಳ್ಳಿ ಚಂದ್ರು, ವಳಹಳ್ಳಿ ವೀರೇಶ್, ಮೀಸೆಮಂಜಯ್ಯ, ಬೆಳಗೋಡು ಬಸವರಾಜು, ದೊಡ್ಡೀರಯ್ಯ, ರವೀಶ್ ಬೆಳಗೋಡು, ಜಾನೆಕೆರೆಲೋಕೇಶ್, ಮೋಹನ್ ಕಾಡ್ಲೂರು, ದಲಿತ ಮುಖಂಡರು ಇದ್ದರು.

ಸಾಲಬಾಧೆ ರೈತ ಆತ್ಮಹತ್ಯೆ

ಹಾಸನ: ಬ್ಯಾಂಕ್ ಸಾಲ ತೀರಿಸಲು ಸಾಧ್ಯವಾಗದೆ ರೈತ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಇತ್ತೀಚೆಗೆ ನಡೆದಿದೆ. ತಾಲ್ಲೂಕಿನ ಶಾಂತಿಗ್ರಾಮ ಹೋಬಳಿ ಚಿಗಹಳ್ಳಿ ನಿವಾಸಿ ಕಷ್ಣೇಗೌಡ(35) ಮೃತರು. ಈತ ಬೆಳೆಸಾಲ, ಭೂಮಿ ಅಭಿವೃದ್ಧಿಗೆ ಕೌಶಿಕ ಗ್ರಾಮ ಪಂಚಾಯಿತಿಯ ಕರ್ಣಾಟಕ ಹಾಗೂ ನಗರದ ಬಿ.ಎಂ ರಸ್ತೆಯ ಕೆನರಾ ಬ್ಯಾಂಕ್‌ಗಳಲ್ಲಿ ಒಟ್ಟು ಉ5.30 ಲಕ್ಷ ಸೇರಿದಂತೆ ಸ್ವಹಾಯ ಮತ್ತು ಸ್ತ್ರೀ ಶಕ್ತಿ ಸಂಘಗಳಲ್ಲೂ ಕೈ ಸಾಲ ಮಾಡಿದ್ದರು. ಸಮರ್ಪಕ ಮಳೆ ಬಾರದೆ ಜೋಳ, ಆಲೂಗೆಡ್ಡೆ ಸಂಪೂರ್ಣ ನಾಶವಾಗಿದ್ದವು. ಇದರಿಂದ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಶಾಂತಿಗ್ರಾಮ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಕಲೇಶಪುರ ಜೆಡಿಎಸ ಯುತ ಕ್ಲಬ ವತಿಯಿಂದ ವಾಲಿಬಾಲ ಪಂದ್ಯಾವಳಿ. ಸಕಲೇಶಪುರದ ಕೂಳ್ಳಲ್ಲಿ ಗ್ರಾಮದಲ್ಲಿ ಇಂದು ವಾಲಿಬಾಲ ಪಂದ್ಯಾವಳಿಯ ಉದ್ಘಾಟನ ಕಾರ್ಯಕ್ರಮ ವನ್ನು ಹಮ್ಮಿಕೊಂಡಿದ್ದು ಈ ಕಾರ್ಯಕ್ರಮದಲ್ಲಿ ಶಾಸಕರಾದ ಹೆಚ ಕೆ ಕುಮಾರಸ್ವಾಮಿ ಮತ್ತು ಜಿಲ್ಲಾ ಫಂಚಾಯತಿ ಸದಸ್ಯೆ ಚಂಚಲಕುಮಾರಸ್ವಾಮಿ ಬೆಳಗೂಡು ಕ್ಷೇತ್ರ ಮತ್ತು ಹಾನುಬಾಲ ಕ್ಷೇತ್ರ ದ ಸದಸ್ಯ ಸುಪ್ರದೀಪ ಯಜ ಮಾನ , ಬಾಗೆ ರಾಮಕೃಷ್ಣ, ಪ್ರಜ್ವಲ ಗೌಡ ಹಾಜರಿದ್ದರು

ದುಂದು ವೆಚ್ಚ ಬೇಡ-ಲೋಕ ಕಲ್ಯಾಣದಲ್ಲಿ ತೊಡಗಿಸಿಕೊಳ್ಳಿ

(-1ನೇ ಪುಟದಿಂದ...)

ಶಾಸಕ ಸಿ.ಎನ್.ಬಾಲಕೃಷ್ಣ ಮಾತ 'ನಾಡಿ ಆದಿಚುಂಚನಗಿರಿ ಮಠ ದೇಶವಿದೇಶಗಳಲ್ಲೂ ಧರ್ಮಕೇಂದ್ರ, ಶಿಕ್ಷಣ ಸಂಸ್ಥೆಗಳನ್ನು ತೆರೆದು ಲಕ್ಷಾಂತರ ಮಕ್ಕಳಿಗೆ ವಸತಿ ಊಟ ವಸ್ತ್ರವನ್ನು ಉಚಿತವಾಗಿ ನೀಡಿ ಸನ್ಮಾರ್ಗದಲ್ಲಿ ನಡೆಯುವ ಮೂಲಕ ಸಾವಿರಾರು ಕುಟುಂಬಗಳಿಗೆ ನೆರವಾಗಿದೆ. ದೇವಾಲಯಕ್ಕೆ ರಸ್ತೆ, ಸಮುದಾಯ ಭವನ ಮಾಡಿಸುವ ಭರವಸೆ ನೀಡಿದರು.

ಸಮಾರಂಭದಲ್ಲಿ ಕಬ್ಬಳಿ ಶಾಖಾ ಮಠದ ಶಿವಪುತ್ರನಾಥ ಸ್ವಾಮೀಜಿ, ವಿಧಾನಪರಿಷತ್ ಸದಸ್ಯ ಎಂ.ಎ. ಗೋಪಾಲಸ್ವಾಮಿ, ಎ.ಪಿ.ಎಂ.ಸಿ. ನಿರ್ದೇಶಕರುಗಳಾದ ಎಂ.ಶಂಕರ್, ಬಿ.ಹೆಚ್. ಶಿವಣ್ಣ, ಜಿ.ಪಂ.ಸದಸ್ಯೆ ಶ್ವೇತಾ ಆನಂದ್, ಆರ್.ಟಿ.ಓ. ಕೃಷ್ಣೇಗೌಡ. ತಾ.ಪಂ. ಮಾಜಿ ಸದಸ್ಯ ಎನ್. ಬಸವರಾಜು, ಹಿರಿಯಣ್ಣಗೌಡ, ನಾಗೇಶ್, ಮಲ್ಲೇಶ್, ಗ್ರಾ.ಪಂ.ಸದಸ್ಯ ಮಂಜುನಾಥ್, ಕಿರುತೆರೆ ಕಲಾವಿದ ಮಿಲ್ಟ್ರಿ ಮಂಜು, ಹಾಗೂ ಇತರರು ಹಾಜರಿದ್ದರು.

24 ತೀರ್ಥಂಕರರಿಗೆ ಅಂಕುರಾರ್ಪಣೆ

(-1ನೇ ಪುಟಕ್ಕೆ)

ತಪಸ್ಸಿಗೆ ತೊಡಗಿದ ತೀರ್ಥಂಕರರಿಗೆ ಕೇವಲ ಜ್ಞಾನ ಅಂದರೆ ಸಕಲವನ್ನು ತಿಳಿಯುವ ಜ್ಞಾನ ಲಭಿಸುತ್ತದೆ. ಕೇವಲ ಜ್ಞಾನ ಪಡೆದ ತೀರ್ಥಂಕರರು ವಿಹಾರವನ್ನು ಆರಂಭಿಸುತ್ತಾರೆ ಹಾಗೂ ಅವರ ಉಪದೇಶಗಳನ್ನು ಸಕಲ ಜೀವಿಗಳಿಗೆ ತಲುಪಿಸಲು ಸಮವಸರಣ ಅಂದರೆ ತೀರ್ಥಂಕರರ ಉಪದೇಶದ ಸ್ಥಳ ರಚನೆಯಾಗುತ್ತದೆ ಎಂದು ಚಾರುಕೀರ್ತಿ ನುಡಿದರು.

ತೀರ್ಥಂಕರರು ಸಮವಸರಣದಲ್ಲಿ ವಿರಾಜಮಾನರಾಗಿ ಜೀವಿಗಳ ಕಲ್ಯಾಣಕ್ಕೆ ಮಾರ್ಗದರ್ಶನ ಮಾಡುತ್ತಾರೆ. ನಂತರ ಅವರಿಗೆ ಮೋಕ್ಷ ಕಲ್ಯಾಣ ನೆರವೇರುತ್ತದೆ ಎಂದರು.

ವರದಿಗಾರ ಬೇಕಾಗಿದ್ದಾರೆ

ಪತ್ರಿಕೋದ್ಯಮದಲ್ಲಿ ಆಸಕ್ತಿ ಇರುವ, ಯಾವುದೇ ಪದವಿ ಹೊಂದಿರುವ ಯುವಕರು 'ಜನತಾಮಾಧ್ಯಮ' ಪತ್ರಿಕೆಗೆ ವರದಿಗಾರನಾಗಿ ಕೆಲಸ ಮಾಡಲು ಬೇಕಾಗಿದ್ದಾರೆ. ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಫೋ :08172- 268494, ಮೊ : 9341212182, 9448653744

ಕುಡಿಯುವ ನೀರು ಕಾಮಗಾರಿಗೆ ಅನುದಾನ ಬಳಕೆ

ಕೊಣನೂರು: ಮೂಲ ಸೌಕರ್ಯಗಳಿಗೆ ಆದ್ಯತೆ ನೀಡುವ ಉದ್ದೇಶದಿಂದ ಶಾಲೆಗಳ ದುರಸ್ಥಿ, ರಸ್ತೆಯ ನಿರ್ಮಾಣ, ಕುಡಿಯುವ ನೀರಿನ ಕಾಮಗಾರಿಗಳಿಗೆ ಅನುದಾನವನ್ನು ಬಳಸಲಾಗುತ್ತಿದೆ ಎಂದು ಜಿಲ್ಲಾ ಪಂಚಾಯಿತಿ ಉಪಾಧ್ಯಕ್ಷ ಹೆಚ್.ಪಿ.ಶ್ರೀನಿವಾಸ್ ತಿಳಿಸಿದರು.

ಪಟ್ಟಣದ ಶ್ರೀಕೋಳಲು ಗೋಪಾಲ ಕೃಷ್ಣ ದೇವಾಲಯದಿಂದ ಕುಂಟುಮಾರಮನ ದೇವಾಲಯದವರೆಗೆ 10 ಲಕ್ಷ ರೂ ವೆಚ್ಚದ ಸುಮಾರು 1 ಕಿ.ಮೀ ಡಾಂಬರ್ ರಸ್ತೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಪಟ್ಟಣದಲ್ಲಿ ವಿವಿಧ ಸೌಕರ್ಯಗಳನ್ನು ಒದಗಿಸುವ ದೃಷ್ಟಿಯಿಂದ 2 ಲಕ್ಷ ವೆಚ್ಚದಲ್ಲಿ ಬಿ.ಎಂ.ಶೆಟ್ಟಿ ಕಾಲೇಜು ಬಳಿ ಬಸ್ ತಂಗುದಾಣ, 2 ಲಕ್ಷ ರೂ ವೆಚ್ಚದ ಸ್ವೀಪರ್ ಕಾಲೋನಿಯ ಬಳಿ ಖಬರ್‌ಸ್ತಾನ್ ಕಾಂಪೌಂಡ್ ಮಾಡಲಾಗುವುದು. 75 ಸಾವಿರ ರೂ ವೆಚ್ಚದಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ಟೈಲ್ಸ್ ಅಳವಡಿಕೆ, ಕಟ್ಟೇಪುರ ಆಸ್ಪತ್ರೆಯನ್ನು 1.50 ಲಕ್ಷ ವೆಚ್ಚದಲ್ಲಿ ದುರಸ್ಥಿಗೆ, ಅರಕಲಗೂಡು ಅರಣ್ಯ ಇಲಾಖೆಯ ವಸತಿಗೃಹ ದುರಸ್ಥಿಗೆ 4 ಲಕ್ಷ ರೂ ನೀಡಲಾಗಿದೆ.

ಬಾನುಗೊಂದಿ ಶಾಲೆಯ ಕೊಠಡಿಗಳ ದುರಸ್ಥಿಗೆ 2 ಲಕ್ಷ ವೆಚ್ಚದಲ್ಲಿ ಕಾಮಗಾರಿ ಪ್ರಗತಿಯಲ್ಲಿದ್ದು, ಹೊಡೆನೂರು ಕೆರೆ ಏರಿಯಿಂದ ಕುಳ್ಳೇಗೌಡರ ಮನೆ ವರೆಗಿನ ರಸ್ತೆಗೆ 2 ಲಕ್ಷ ರೂ, ಕಾಡನೂರು ಗ್ರಾಮ ಪರಿಮಿತಿಯ ರಸ್ತೆ ಅಭಿವೃದ್ಧಿಗೆ 2 ಲಕ್ಷ, ದೊಡ್ಡಬೊಮ್ಮನಹಳ್ಳಿಯಿಂದ ಅಬ್ಬೂರಿಗೆ ತೆರಳುವ ರಸ್ತೆ ಅಭಿವೃದ್ಧಿಗೆ 1 ಲಕ್ಷ, ಕಡುವಿನಹೊಸಹಳ್ಳಿಯ ಸಣ್ಣಕ್ಕಿಗೌಡನ ಕೊಪ್ಪಲಿನ ಗ್ರಾಮ ಪರಿಮಿತಿಯ ರಸ್ತೆ ಅಭಿವೃದ್ಧಿಗೆ 1 ಲಕ್ಷ, ಅಬ್ಬೂರು ಮಜ್ಜನಹಳ್ಳಿ ರಸ್ತೆ ನಿರ್ಮಾಣಕ್ಕೆ 1 ಲಕ್ಷರೂ ಮೀಸಲಿಡಲಾಗಿದೆ. ಕೊಣನೂರಿನ ರೈತ ಸಂಪರ್ಕ ಕೇಂದ್ರದ ನೂತನ ಕಟ್ಟಡ ನಿರ್ಮಾಣವು ಹಲವು ವರ್ಷಗಳಿಂದ ಸ್ಥಗಿತಗೊಂಡಿದ್ದು ಇದರ ನಿರ್ಮಾಣಕ್ಕಾಗಿ ಕೃಷಿ ಸಚಿವ ಕೃಷ್ಣ ಬೈರೇಗೌಡರನ್ನು ಖುದ್ದು ಭೇಟಿಯಾಗಿ 50 ಲಕ್ಷ ರೂ ಅನುದಾನವನ್ನು ತಂದಿದ್ದು ಕಾಮಗಾರಿಯು ಟೆಂಡರ್ ಹಂತದಲ್ಲಿದೆ ಎಂದರು.

ಇದೇ ಸಂದರ್ಭದಲ್ಲಿ ತಾ ಪಂ ಸದಸ್ಯ ಇಮ್ರಾನ್ ಮೊಕ್ತಾರ್, ಗ್ರಾ ಪಂ ಅಧ್ಯಕ್ಷ ಕೆ,ಬಿ ರಮೇಶ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಸ್.ಕೆ.ಕೃಷ್ಣಪ್ಪ, ಗ್ರಾ ಪಂ ಸದಸ್ಯ ಎಸ್.ನಾಗರಾಜು, ಬಿ.ನಾಗರಾಜು. ವಿಶ್ವಾಸ್ ಮಹೇಶ್, ಶೋಭಾ ರಾಜನಾಯ್ಕ, ಗ್ರಾ ಪಂ ಮಾಜಿ ಅಧ್ಯಕ್ಷ ಕೃಷ್ಣಪ್ಪ ಮೊದಲಾದವರು ಉಪಸ್ಥಿತರಿದ್ದರು.

ತಕ್ಷಣ ಬೇಕಾಗಿದ್ದಾರೆ

ಎಲ್ಲರಿಗೂ ಮಹಾಶಿವಾರಾತ್ರಿ ಹಬ್ಬದ ಶುಭಾಶಯಗಳು

ಇಂಟರ್‌ನ್ಯಾಷನಲ್ ಟ್ರ್ಯಾಕ್ಟರ್ ಕಂಪೆನಿಯ ಸೊನಾಲಿಕ ಟ್ರ್ಯಾಕ್ಟರ್ ಶೋರೂಂನಲ್ಲಿ ಸೇಲ್ಸ್ ಎಕ್ಸಿಕ್ಯೂಟಿವ್, ಸೇಲ್ಸ್ ಮ್ಯಾನೇಜರ್ ಹುದ್ದೆ ಖಾಲಿ ಇದ್ದು, ಹೊಳೆನರಸೀಪುರ ಮತ್ತು ಚನ್ನರಾಯಪಟ್ಟಣ ತಾಲ್ಲೂಕುಗಳಿಗೆ ಬೇಕಾಗಿದ್ದಾರೆ. ಬೈಕ್ ಇದ್ದವರಿಗೆ ಮೊದಲ ಆದ್ಯತೆ. ಆಕರ್ಷಕ ಸಂಬಳ ನೀಡಲಾಗುವುದು.

ಸಂಪರ್ಕಿಸಿ :
ಜೈ ಹನುಮಾನ್ ಟ್ರಾಕ್ಟರ್ಸ್, ಬಿ.ಎಂ.ರಸ್ತೆ, ಚನ್ನರಾಯಪಟ್ಟಣ.
ಮೊ : 9900557770, 08176-253345 , 9008436562

ಭಗವಾನ್ ಕಾಫಿ
Bhagavan Coffee

ನಮ್ಮಲ್ಲಿ ಉತ್ತಮವಾದ **ತಾಜಾ** ಕಾಫಿಪುಡಿ **ಮಾತ್ರ** ದೊರೆಯುತ್ತದೆ.

ಕಾಫಿಪುಡಿ ತಯಾರಿಕೆಯಲ್ಲಿ 50 ವರ್ಷಗಳ ಅನುಭವ
ತಾಜಾ ಕಾಫಿ ಪುಡಿಗೆ ಇಂದೇ ಭೇಟಿ ಕೊಡಿ
ನಮ್ಮಲ್ಲಿ ASSAM Tea-ಪುಡಿ ದೊರೆಯುತ್ತದೆ

ನಮ್ಮಲ್ಲಿ ಕಾಫಿ ಬೀಜವನ್ನು ಹದವಾಗಿ ಹುರಿದು ಪುಡಿ ಮಾಡಿಕೊಡಲಾಗುತ್ತದೆ.

ಭಗವಾನ್ ಕಾಫಿ ವರ್ಕ್ಸ್, ಭಗವಾನ್ ಬಿಲ್ಡಿಂಗ್, ಕಟ್ಟಿನಕೆರೆ ಮಾರುಕಟಟ್ಟೆ
ಹಾಸನ. ಫೋ: 08172-269162

ವಧು-ವರರ ಅನ್ವೇಷಣೆ

ಆದಿಚುಂಚನಗಿರಿ ಒಕ್ಕಲಿಗರ ಮಹಿಳಾ ಸಮಾಜ
ರವೀಂದ್ರನಗರ (ಪಾರ್ಕ್ ರಸ್ತೆ) ಹಾಸನ.
08172 233188, 82775 92892

ನಮ್ಮ ಸಮಾಜದ ವಧು-ವರರ ಅನ್ವೇಷಣಾ ಕೇಂದ್ರದಲ್ಲಿ ವಧು-ವರರ ಮಾಹಿತಿಯನ್ನು ನೊಂದಣಿ ಮಾಡಲು ಹಾಗೂ ಪಡೆಯಲು ಸಂಘದ ಕಛೇರಿಯನ್ನು ಸಂಪರ್ಕಿಸಿ:

ಸಮಯ : ಬೆಳಿಗ್ಗೆ 11 ರಿಂದ 1
ಸಂಜೆ 4 ರಿಂದ 6 ಘಂಟೆವರೆಗೆ

ನ್ಯೂಟ್ರಾಸಿಟಿಕಲ್‌ನಿಂದ ಪರಿಹಾರ

ಈ ಕೆಳಗಿನ ರೋಗಗಳಿಗೆ ನ್ಯೂಟ್ರಾಸಿಟಿಕಲ್ (ಪರ್ಯಾಯ ಆಹಾರ)ನಿಂದ ಅತ್ಯಧಿಕ ಪರಿಣಾಮಕಾರಿ ಚಿಕಿತ್ಸೆಗಳು ಲಭ್ಯ ಮೂಲವ್ಯಾಧಿ, ಕೀಲುನೋವು, ಮೂತ್ರಪಿಂಡ ಹರಳು, ಡೆಂಗ್ಯೂ

ಸಂಪರ್ಕಿಸಿ:
[illegible] ಫೌಂಡೇಶನ್
9448320199, 9449772877

ಮನೆ ಮಾರಾಟಕ್ಕಿದೆ

ಹಾಸನದಲ್ಲಿರುವ -ಕುವೆಂಪುನಗರ ಬಡಾವಣೆಯಲ್ಲಿರುವ ಬಿ.ಎಸ್.ಎನ್.ಎಲ್. ಭವನದ ಹಿಂಭಾಗ 19ನೇ ಕ್ರಾಸ್ , ಇ. ಡಬ್ಲ್ಯೂ. ಸ್ ಮನೆ ನಂ.784 ಮನೆ ತಕ್ಷಣ ಮಾರಾಟಕ್ಕಿದೆ.

ಸಂಪರ್ಕಿಸಿ :
99164 20006

ಹೃದಯ-ಎದೆಗೂಡಿನ ಮತ್ತು
ನಾಳಗಳ ಶಸ್ತ್ರಚಿಕಿತ್ಸಾ ಕ್ಲಿನಿಕ್

ದಿನಾಂಕ : 14ನೇ ಫೆಬ್ರವರಿ 2018 (ಪ್ರತಿ ತಿಂಗಳು - 2ನೇ ಬುಧವಾರ)
ಸಮಯ : ಬೆಳಗ್ಗೆ 10.00 ರಿಂದ ಮಧ್ಯಾಹ್ನ 2:00ರವರೆಗೆ.

ಈ ಕೆಳಗಿನ ಯಾವುದೇ ಲಕ್ಷಣಗಳು ನಿಮ್ಮನ್ನು ಬಾಧಿಸುತ್ತಿವೆಯೇ.?
ಎದೆಯಲ್ಲಿ ತಳಮಳ । ತೋಳುಗಳಿಗೆ ಹಬ್ಬುವ ಎದೆ ನೋವು । ಹೊಟ್ಟೆ ತೊಳಸು ಅಥವಾ ತಲೆ ಸುತ್ತುವಿಕೆ । ಎದೆ ಉರಿ । ದವಡೆ ಅಥವಾ ಕುತ್ತಿಗೆಯಲ್ಲಿ ನೋವು । ಹಠಾತ್ ಬೆವರುವಿಕೆ । ಆಯಾಸ । ಕ್ರಮ ತಪ್ಪಿದ ಎದೆಯ ಬಡಿತ
ನಾಳೀಯ ರೋಗದ ಲಕ್ಷಣಗಳು : ಪೃಷ್ಠ, ತೊಡೆ ಇಲ್ಲವೇ ಮೀನು ಖಂಡದಲ್ಲಿ ನೋವಿನ ಬಿಗಿತ ಉಂಟಾಗುವುದು. ಕಾಲಿನ ಕೆಳಭಾಗ ಇಲ್ಲವೇ ಪಾದದಲ್ಲಿ ಕೊರೆತದ ಅನುಭವ

ಡಾ. ಆದಿಲ್‌ಸಾದಿಕ್
ಎಂ.ಎಸ್.(ಜನರಲ್ ಸರ್ಜರಿ), ಎಂ.ಸಿ.ಹೆಚ್ (ಸಿಟಿವಿಎಸ್),
ಎಫ್‌ಎಸಿಎಸ್ (ಯುಎಸ್‌ಎ), ಎಫ್‌ಎಂಐಸಿಎಸ್ (ಯುಎಸ್‌ಎ)
ಹಿರಿಯ ಸಮಾಲೋಚಕರು ಮತ್ತು ಮುಖ್ಯಸ್ಥರು :
ಕಾರ್ಡಿಯೋ-ಥೊರ್ಯಾಸಿಕ್ ಮತ್ತು ವ್ಯಾಸ್ಕ್ಯುಲಾರ್ ಸರ್ಜರಿ
ಕನಿಷ್ಠ ಛೇದನದ ಹೃದಯದ ಸರ್ಜರಿಯಲ್ಲಿ ತಜ್ಞರು
ಸಾಕ್ರ ಇನ್‌ಸ್ಟಿಟ್ಯೂಟ್ ಆಫ್ ಕಾರ್ಡಿಯಾಕ್ ಸೈನ್ಸಸ್

ಡಾ. ಎಂ.ಎಚ್.ರಶೀದ್
ಎಂ.ಬಿ.ಬಿ.ಎಸ್, ಎಂ.ಡಿ, ಡಿ.ಎಮ್
ಪ್ರಮಾಣೀಕೃತ ಹೃದ್ರೋಗ ಮಂಡಳಿ
(ಜಾನ್ ಹಾಪ್ಕಿನ್ಸ್ ಯೂನಿವರ್ಸಿಟಿ ಆಫ್ ಮೆಡಿಸಿನ್)
ಕಾರ್ಡಿಯಾಕ್ ಎಲೆಕ್ಟ್ರೋಫಿಸಿಯಾಲಜಿ (ಜಪಾನ್)ನಲ್ಲಿ ಫೆಲೋಶಿಪ್
ಹಿರಿಯ ಸಲಹೆಗಾರರು - ಇಂಟರ್‌ವೆನ್ಷನಲ್ ಕಾರ್ಡಿಯಾಲಜಿ ಮತ್ತು ಎಲೆಕ್ಟ್ರೋಫಿಸಿಯಾಲಜಿ

ಅಪಾಯಿಂಟ್ಮೆಂಟ್‌ಗಾಗಿ ಕರೆ ಮಾಡಿ :
08172-264022 / 266022/7899730613

SAKRA
WORLD HOSPITAL

ನೋಂದಣಿ ಸಂಖ್ಯೆ : 411/2003-04
ಸ್ಥಾಪನೆ: 2003

ಶ್ರೀ ವಿಘ್ನೇಶ್ವರ ವಿವಿದೋದ್ದೇಶ ಸೌಹಾರ್ದ ಸಹಕಾರಿ (ನಿ.)
1ನೇ ಮುಖ್ಯ ರಸ್ತೆ, ಹೊಸ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಎದುರು, ಹೌಸಿಂಗ್‌ಬೋರ್ಡ್ ಕಾಲೋನಿ, ಹಾಸನ

ರೂ.25 ಲಕ್ಷಗಳವರೆಗೆ ಸಾಲ ಸೌಲಭ್ಯ (ಕಟ್ ಇಂಟರೆಸ್ಟ್) ದೊರಕುತ್ತದೆ.

◆ ಚಿನ್ನಾಭರಣ ಅಡಮಾನ ಸಾಲ ◆ ಚಿನ್ನಾಭರಣ ಖರೀದಿ ಸಾಲ
◆ ನಿವೇಶನ ಅಡಮಾನ ಸಾಲ ◆ ಗೃಹ ಅಡಮಾನ ಸಾಲ
◆ ನಿವೇಶನ ಖರೀದಿ ಸಾಲ ◆ ಗೃಹ ಖರೀದಿ ಸಾಲ
◆ ರೆವಿನ್ಯೂ ನಿವೇಶನಗಳಿಗೆ ಸಾಲ ದೊರೆಯುತ್ತದೆ.

(ರೂ.1,00,000/- ಚಿನ್ನಾಭರಣ ಸಾಲಕ್ಕೆ 1 ತಿಂಗಳಿಗೆ ಕೇವಲ ರೂ.1,000/- ಬಡ್ಡಿ ವಿಧಿಸಲಾಗುತ್ತದೆ)

ಸಂಪರ್ಕಿಸಿ:
08172-231389

Printed and Published by Dr. A.C. Munivenkategowda & Owned By Snehitaru Nirvahane, Janatha Clinic, R.C. Road, Hassan, Karnataka & Printed at Snehitaru Nirvahane Printing Press, R.C. Road, Hassan, Karnataka, Published From Snehitaru NirvahanePrintingPress, Janatha Clinic, R.C. Road, Hassan -Pin:573201, Editor :R. P. Venkateshmurthy. Ph: 268494 Fax No-08172-260494
http://janathamadhyama.epapertoday.com e-mail: jm_hsn @yahoo.com siddujm@rediffmail.com